# ಎನ್‌ಐಟಿಕೆಯಲ್ಲಿ ವಿಜ್ಞಾನ ಜ್ಯೋತಿ



ಮಂಗಳೂರು:ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರಾಯೋಜಕತ್ವದಲ್ಲಿ ಎನ್‌ಐಟಿಕೆ ಸುರತ್ಕಲ್, ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್ (ಎಸ್‌ಟಿಇಪಿ), ಜೆಎನ್‌ವಿ ದ.ಕ. ಸಹಭಾಗಿತ್ವದಲ್ಲಿ ವಿಜ್ಞಾನ ಜ್ಯೋತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವು ಹುಡುಗಿಯರಲ್ಲಿ ವೈಜ್ಞಾನಿಕ ಮನೋಧರ್ಮ ಹೆಚ್ಚಿಸಲು ಮತ್ತು ಯಾವುದೇ ಲಿಂಗ ಪಕ್ಷಪಾತವಿಲ್ಲದೆ ವಿಜ್ಞಾನ ಮತ್ತು ತಂತ್ರಜ್ಞಾನದ ವೈವಿಧ್ಯಮಯ ಕ್ಷೇತ್ರಗಳ ಆಯ್ಕೆಗೆ ಪ್ರೋತ್ಸಾಹಿಸುವ ಗುರಿ ಹೊಂದಿದೆ. ವಿದ್ಯಾರ್ಥಿಗಳು ಎನ್‌ಐಟಿಕೆಯ ಕೇಂದ್ರೀಯ ಸಂಶೋಧನಾ ಸೌಲಭ್ಯ (ಸಿಆರ್‌ಎಫ್) ಭೇಟಿ ನೀಡಿ ಲಭ್ಯವಿರುವ ವಿಶ್ವದರ್ಜೆಯ ಸಂಶೋಧನಾ ಸೌಲಭ್ಯಗಳ ಬಗ್ಗೆ ತಿಳಿದುಕೊಂಡರು.

ಎನ್‌ಐಟಿಕೆಯಲ್ಲಿ ಸ್ಥಾಪಿಸಲಾದ ಜೈವಿಕ ಅನಿಲ ಘಟಕದಲ್ಲಿ (ದಿನಕ್ಕೆ 500 ಕೆಜಿ) ಆಹಾರ ತ್ಯಾಜ್ಯ ಮರುಬಳಕೆ ಪ್ರಕ್ರಿಯೆಯಿಂದ ಉತ್ಪತ್ತಿಯಾಗುವ ಜೈವಿಕ ಅನಿಲದ ಕುರಿತು ಒಳನೋಟ ಪಡೆಯಲು ವಿದ್ಯಾರ್ಥಿಗಳು ಇಟಲಿಯ ಮೈರೆ ಟೆಕ್ನಿಮೊಂಟ್ ಕಂಪನಿಯು ಪ್ರಾಯೋಜಿಸಿರುವ ಜೈವಿಕ ತ್ಯಾಜ್ಯ ಮರುಬಳಕೆ ಘಟಕಕ್ಕೆ ಭೇಟಿ ನೀಡಿದರು.

ಅನೇಕ ರೀತಿಯ ಡ್ರೋನ್‌ಗಳು ಮತ್ತು ಸಿಎಸ್‌ಡಿಯ ಉನ್ನತ 3ಡಿ ಮುದ್ರಣ ತಂತ್ರಜ್ಞಾನದ ಬಗ್ಗೆ ತಿಳಿಯಲು ಎನ್‌ಐಟಿಕೆಯಲ್ಲಿನ ಸೆಂಟರ್ ಫಾರ್ ಸಿಸ್ಟಮ್ ಡಿಸೈನ್‌ಗೆ ಭೇಟಿ ನೀಡಿದರು. ಎಸ್‌ಟಿಇಪಿ ಮತ್ತು ಎನ್‌ಐಟಿಕೆ ಇತರ ಇಲಾಖೆಗಳಿಗೆ ಭೇಟಿ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಯಾವುದೇ ಲಿಂಗ ಪಕ್ಷಪಾತವಿಲ್ಲದೆ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮತ್ತು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಗೆ ಕೊಡುಗೆ ನೀಡಲು ತೊಡಗಿಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ.ಜಿ.ಸಿ. ಮೋಹನ್ ಕುಮಾರ್, ಸ್ಟೆಪ್ ಸಂಯೋಜಕ ಪ್ರೊ.ಅರುಣ್ ಎಂ.ಇಸ್ಲೂರ್, ಜೆಎನ್‌ವಿ ಮುಡಿಪು ಪ್ರಾಂಶುಪಾಲ ಪಿ.ರಾಜೇಶ್ ಉಪಸ್ಥಿತರಿದ್ದರು.

Samyutha Karnataka, Date: 19/11/22 p, no - 03